## ‘ವ್ಹೋಳಕ್ ತಗೋಂಬರ್‍ರಿ’

8–10 ವರ್ಷಗಳ ಹಿಂದೆ. ನಮ್ಮೂರು ಅಫಜಲಪುರದಿಂದ ಮಾದನಹಿಪ್ಪರಗಾಕ್ಕೆ ಹೋಗಬೇಕಿತ್ತು. ನಡುವೆ ಅಕ್ಕಲಕೋಟೆ ತಾಲೂಕಿನ ಮೈಂದರ್ಗಿಯಲ್ಲಿ ಬಸ್ ಬದಲಿಸಬೇಕಾಗಿತ್ತು. ಮೈಂದರ್ಗಿಯಲ್ಲಿ ಇಳಿದಾಗ ಆ ಬಸ್ಸು ಹೊರಟು ಹೋಗಿತ್ತು. ಅಲ್ಲಿ ತಲುಪಲು ಬೇರೆ ವಾಹನಗಳ ವ್ಯವಸ್ಥೆಯ ಇರಲಿಲ್ಲ. ಬಾಡಿಗೆ ಸೈಕಲ್ ಪಡೆದು ಹೋಗಬಹುದಿತ್ತು. ಹತ್ತಿರದ ಬಾಡಿಗೆ ಸೈಕಲ್ ಅಂಗಡಿಗೆ ಹೋಗಿ ಸೈಕಲ್ ಕೇಳಿದೆ. ಅದಕ್ಕೆ ಅವನು, ‘ವ್ಹೋಳಕ್ ತಗೋಂಬರ್‍ರಿ’ ಅಂದ. ಅದನ್ನೆಲ್ಲಿ ಹುಡುಕುವುದು ಎಂದುಕೊಳ್ಳುತ್ತ ದಿನಸಿ ಅಂಗಡಿಗೆ ಹೋಗಿ, ‘ವ್ಹೋಳಕ್ ಕೊಡ್ರಿ’ ಎಂದೆ. ಅವನು ನಗುತ್ತ ‘ನಮ್ಮಂಗಡ್ಯಾಗ ಸಿಗಂಗಿಲ್ಲರೀ’ ಅಂದ. ಸಿಟ್ಟಿನಲ್ಲಿ ‘ಯಾಕ್‌ರಿ’ ಎಂದು ಕೇಳಿದಾಗ, ‘ವ್ಹೋಳಕ್’ ಅಂದ್ರ ಮರಾಠಿಯೊಳಗ ‘ಪರಿಚಯ’ ಎಂದು ವಿವರಿಸಿದ. ಗುರುತು– ಪರಿಚಯ ತಂದರೆ ಸೈಕಲ್ ಕೊಡುತ್ತೇನೆ ಎಂದಷ್ಟೇ ಅವನು ಹೇಳಿದ್ದಾಗಿತ್ತು!



**ಡಿ.ಎಮ್. ನದಾಫ್**

## ಸಿಜೇರಿಯನ್

ಗೋಕುಲಾಷ್ಟಮಿ ದಿನ ನನ್ನ ಗೆಳೆಯ ಖಾದ್ರಿ ಪಾಶೂ ಮನೆಯಿಂದ ಬೆಳಗ್ಗೆ 7ಕ್ಕೆ ಫೋನ್ ಬಂತು. ‘ರಾಘು, ಮನೆಗೆ ಬಂದು ಕೃಷ್ಣನ ಪ್ರಸಾದ ತಗೊಂಡು ಹೋಗು’ ಎಂದ. ನಾನು 11ರ ಸುಮಾರಿಗೆ ಅವರ ಮನೆಗೆ ಹೋದೆ. ಅವನ ಹೆಂಡತಿ ಶಾಂತಾ ಪ್ರಸಾದವೆಂದು ತಿಂಡಿಯ ಪೊಟ್ಟಣ ಕೊಟ್ಟರು. ‘ಅಲ್ಲಾ ಪಾಶೂ, ಶ್ರೀಕೃಷ್ಣ ರಾತ್ರಿ ಅಲ್ಲವಾ ಹುಟ್ಟೋದು, ನಿಮ್ಮನೆಯಲ್ಲಿ ಬೆಳಗ್ಗೆನೇ ಹುಟ್ಟಿಸಿದ ಹಾಗೆ ಕಾಣುತ್ತೆ?’ ಎಂದೆ. ಅದಕ್ಕೆ ಅವನು ನಗುತ್ತಾ, ‘ಹೌದು ಕಣೊ, ನಾವು ವಯಸ್ಸಾದವರು, ರಾತ್ರಿವರೆಗೂ ಕಾಯಕ್ಕಾಗಲ್ಲಾಂತ ಬೆಳಗ್ಗೆನೇ ಸಿಜೇರಿಯನ್ ಮಾಡಿಸಿ ಬಿಟ್ವಿ’ ಎಂದ.



**ಗೊಲ್ಲಹಳ್ಳಿ ರಾಘು**

ಚಿತ್ರಗಳು: ಗಣೇಶ ಆಚಾರ್ಯ